**ದಿನಾಂಕಃ 22.01.2020 ರಂದು ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು.**

**ಃಪಾಟೀ ಸವಾಲು ಶ್ರೀ.ಜಿ ಬಿ ಎ ವಕೀಲರಿಂದ**

ನಾನು ಎಲ್ ಎಲ್ ಎಸ್ ಸಿ ವರೆಗೆ ವಿದ್ಯಾಬ್ಯಾಸ ಮಾಡಿರುತ್ತೇನೆ. ದಾವಾ ಸರ್ವೆ ನಂ 9/5 ಆಗಿರುತ್ತದೆ. ದಾವಾ ಆಸ್ತಿಯ ವಿಸ್ತೀರ್ಣ 1 ಎಕರೆ 18 ವರೆ ಗುಂಟೆ ಅಗಿರುತ್ತದೆ. ನಾನು ಬೋಚಿಹಳ್ಳಿ ಗ್ರಾಮದ ವಾಸಿ ಎಂದರೆ ಸರಿ. ನನ್ನ ತಾಯಿ ಗಂಗಮ್ಮ ಹಾಗೂ ನನ್ನ ತಂದೆ ಚಿಕ್ಕಣ್ಣ ಎಂದು ತೋರಿಸಲು ನನ್ನ ಬಳಿ ದಾಖಲೆ ಇರುತ್ತದೆ. ನಾನು ಸದರಿರವರು ನನ್ನ ತಂದೆ ತಾಯಿ ಎಂದು ತೋರಿಸಲು ನನ್ನ ಬಳಿ ಯಾವುದೆ ದಾಖಲೆ ಇರುವುದಿಲ್ಲ.

1 ಮತ್ತು 2 ನೇ ಪ್ರತಿವಾದಿಯ ತಾಯಿಯ ಹೆಸರು ತಿಮ್ಮಮ್ಮಹಾಗೂ ತಂದೆಯ ಹೆಸರು ಚಿಕ್ಕಣ್ಣ ಎಂದರೆ ಸರಿ. 1 ಮತ್ತು 2 ನೇ ಪ್ರತಿವಾದಿಯರ ತಂದೆ ಚಿಕ್ಕಣ್ಣ ಈಗ ಫವತಿ ಆಗಿರುತ್ತಾರೆ ಎಂದರೆ ಸರಿ. 1 ಮತ್ತು 2 ನೇ ಪ್ರತಿವಾದಿ ಹಾಗೂ ಅವರ ತಂದೆ ತಾಯಿ ಎಂದರೆ ಚಿಕ್ಕಣ್ಣ ಮತ್ತು ತಿಮ್ಮಮ್ಮ ದಿಃ 17.04.2002 3 ನೇ ಪ್ರತಿವಾದಿಗೆ ದಾವಾ ಆಸ್ತಿಯಲ್ಲಿ 1 ಎಕರೆ ಸ್ವತ್ತನ್ನು ನೊಂದಾಯಿತ ಕ್ರಯ ಪತ್ರದ ಮೂಲಕ ಕ್ರಯಕ್ಕೆ ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ಅಂದಿನಿಂದ ಕ್ರಯ ಪತ್ರ ಆದ ನಂತರ 1 ನೇ ಪ್ರತಿವಾದಿ ಸದರಿ ಸ್ವತ್ತನ್ನು ಅನುಭವಿಸಿಕೊಂಡು ಬಂದಿರುತ್ತಾರೆ ಎಂದರೆ ಸರಿಯಲ್ಲ. ಕ್ರಯ ಪತ್ರ ಆದ ನಂತರ ಖಾತೆ

ಬದಲಾವಣೆ ಆಗಿ ಈಗಲೂ 3 ನೇ ಪ್ರತಿವಾದಿ ಹೆಸರಿನಲ್ಲಿ ಪಹಣಿ ಬರುತ್ತಿರುತ್ತದೆ ಎಂದರೆ ಸುಳ್ಳು. ದಿಃ 16.08.2007 ರಂದು ಉಳಿಕೆ ದಾವಾ ಆಸ್ತಿ 18 ವರೆ ಗುಂಟೆ 1 ಮತ್ತು 2 ನೇ ಪ್ರತಿವಾದಿಯ ಹಾಗೂ ಅವರ ತಂದೆ ತಾಯಿ ಚಿಕ್ಕಣ್ಣ ಮತ್ತು ತಿಮ್ಮಮ್ಮ ರೂ.19000 ಕ್ಕೆ 3 ನೇ ಪ್ರತಿವಾದಿಗೆ ಕ್ರಯಕ್ಕೆ ಕೊಟ್ಟಿರುತ್ತಾರೆ ಎಂದರೆ ಸುಳ್ಳು. ಸದರಿ ಕ್ರಯ ಪತ್ರ ಆದ ನಂತರ 3 ನೇ ಪ್ರತಿವಾದಿ ಹೆಸರಿಗೆ ಖಾತೆ ಬದಲಾವಣೆ ಆಗಿ ಅವರ ಹೆಸರಿಗೆ ಪಹಣಿ ಇರುತ್ತದೆ ಎಂದರೆ ಸರಿಯಲ್ಲ. ಸದರಿ ಸ್ವತ್ತುಗಳು ಎರಡು ಕ್ರಯ ಪತ್ರದ ಮೂಲಕ 1 ನೇ ಪ್ರತಿವಾದಿಯ ಮದುವೆ ಮತ್ತು ಇತರೆ ಖರ್ಚುಗಳಿಗಾಗಿ ಮಾರಾಟ ಮಾಡಿರುತ್ತಾರೆಂದರೆ ಸರಿಯಲ್ಲ. ನಾನು ಮತ್ತು 2 ಮತ್ತು 3 ನೇ ವಾದಿಯರು ಚಿಕ್ಕಣ್ಣ ಹಾಗೂ ಗಂಗಮ್ಮನ ಮಕ್ಕಳು ಎಂದು ತೋರಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಯಾವ ದಾಖಲೆಗಳನ್ನು ಸಲ್ಲಿಸಿರುತ್ತೀಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಯಾವ ದಾಖಲೆಗಳು ಸಲ್ಲಿಸಿರುವುದಿಲ್ಲ ಎಂದು ನುಡಿದಿರುತ್ತಾರೆ.

ದಾವಾ ಆಸ್ತಿಯು 1 ಮತ್ತು 2 ನೇ ಪ್ರತಿವಾದಿ ಹಾಗೂ ಅವರ ತಂದೆ ತಾಯಿಯಾದಂತಹ ಚಿಕ್ಕಣ್ಣ ಹಾಗೂ ತಿಮ್ಮಮ್ಮನಿಗೆ ಸೇರಿರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಇರುವುದಿಲ್ಲ ಮತ್ತು ದಾವಾ ಆಸ್ತಿಯನ್ನು ನಾನು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ನಾವು ಚಿಕ್ಕಣ್ಣ ಹಾಗೂ ಗಂಗಮ್ಮ ಮಕ್ಕಳು ಆಗಿರುವುದಿಲ್ಲ ಮತ್ತು ದಾವಾ ಆಸ್ತಿಯು ನಮ್ಮ ಒಟ್ಟು ಕುಟುಂಬದ ಆಸ್ತಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನಮ್ಮ ಕುಟುಂಬಕ್ಕೂ ಹಾಗೂ ಪ್ರತಿವಾದಿ ಕುಟುಂಬಕ್ಕೂ ಯಾವುದೇ ಸಂಬಂದ ಇರುವುದಿಲ್ಲಎಂದರೆ ಸರಿಯಲ್ಲ. ನಾನು ಆಸ್ತಿಯನ್ನು ಲಪಟಾಯಿಸಲು ಸುಳ್ಳು ದಾವೆಯನ್ನು ತಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇರುವುದಿಲ್ಲ.**

ಗಣಕೀಕರಿಸಿ ಓದಿ ಹೇಳಿ, ಕೇಳಿದಾಗ ಸರಿ ಇದೆ ಎಂದುಒಪ್ಪಿರುತ್ತಾರೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು.

ತಿಪಟೂರು.